**ಸಾಕ್ಷಿಯನ್ನು ದಿಃ 28.11.2024 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ  ಪ್ರತಿವಾದಿ ಪರ ವಕೀಲರಿಂದಃ**

1. ಪಿರಿಯಾಪಟ್ಟಣ ನ್ಯಾಯಾಲಯದಲ್ಲಿ ನಾನು ಹಣ ವಸೂಲಿಗಾಗಿ ಒಂದು ಚೆಕ್ ಪ್ರಕರಣ ಹಾಗೂ 2 ಕರಾರು ಪತ್ರ ಅನುಷ್ಟಾನಕ್ಕೆ ದಾವೆ ಹಾಕಿರುತ್ತೇನೆ.

2. ಪ್ರತಿವಾದಿಯ ಮೇಲೆ ಇದು ಒಂದೇ ದಾವೆ ಮಾತ್ರ ಹಾಕಿರುತ್ತೇನೆ.

3. ನಿಪಿ - 1 ನ್ನು ಪ್ರತಿವಾದಿ ದಿಃ 25.07.2013 ರಂದು ಬರೆದುಕೊಟ್ಟಿದ್ದಾರೆ.

4. ಪ್ರತಿವಾದಿಗೆ ನಾನು ನೊಟೀಸು ನೀಡಿದ ದಿನಾಂಕ ನನಗೆ ಈಗ ನೆನಪಿಲ್ಲ.

5. ಪ್ರತಿವಾದಿ ಪ್ರತ್ಯುತ್ತರ ನೊಟೀಸು ನೀಡಿದ್ದಾರೆ. ಯಾವ ದಿನಾಂಕ ಎಂದು ಈಗ ನೆನಪಿಲ್ಲ.

6. ದಾವಾ ಸ್ವತ್ತು ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ. ಆ ಬಗ್ಗೆ ದಾಖಲೆಯನ್ನು ಹಾಜರುಪಡಿಸಿದ್ದೀರಾ ಎಂದರೆ, ಮನೆಯ ಕ್ರಯಪತ್ರ ನೋಡಿದ ನಂತರವೇ ಕರಾರು ಪತ್ರ ನೊಂದಣಿ ಮಾಡಿಸಿರುತ್ತೇವೆ.

7. ದಾವಾ ಸ್ವತ್ತು ಈಗಲೂ ಪ್ರತಿವಾದಿಯ ಹೆಸರಿನಲ್ಲಿ ಇದೆ.

8. ದಾವಾ ಸ್ವತ್ತು ಕ್ರ.ಸಂ.87 ಎಂದು ಫಾರಂ ನಂ.11 ರಲ್ಲಿ ನಮೂದು ಇರುತ್ತದೆ. ಅಸೆಸ್ಮೆಂಟ್ ಮತ್ತು ಡಿಮ್ಯಾಂಡ್ ನಂಬರ್ ನಾನು ಹಾಜರುಪಡಿಸಿರುವ ದಾಖಲೆಯಲ್ಲಿ ಇರುತ್ತದೆ.

9. ದಾವಾ ಜಮೀನು ಮಾಲಂಗಿ ಗ್ರಾಮ ಪಂಚಾಯತಿ ಸೇರುತ್ತದೆ, ಅದನ್ನು ದಾವಾ ಶೆಡ್ಯೂಲ್ ನಲ್ಲಿ ಬರೆಸಿರುತ್ತೇನೆ.

10. ದಾವಾ ಸ್ವತ್ತು ಈಗ ಯಾವ ಪಂಚಾಯತಿಗೆ ಸೇರಿದೆ ಎಂದರೆ, ನನಗೆ ಮಾಹಿತಿ ಇಲ್ಲ.

11. ದಾವಾ ಸ್ವತ್ತು ಅಳತೆ ಪೂರ್ವ ಪಶ್ಚಿಮ – 40, ಉತ್ತರ ದಕ್ಷಿಣ – 20 ಅಡಿ ಇರುತ್ತದೆ. ಮನೆಯ ವಿಸ್ತೀರ್ಣ ಈಗ ನನಗೆ ನೆನಪಿಲ್ಲ.

**(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ

ಪಿರಿಯಾಪಟ್ಟಣ